## ೨

# *YAHWEH:* "ಯೆಹೋವ"

ದೇವರ ಒಂದೇ ನಿಜವಾದ ಹೆಸರು ಯಾಹ್ವೆ, ದೇವರು ತನ್ನ ಮಕ್ಕಳಾದ ಇಸ್ರಾಯೇಲರನ್ನು ಐಗುಪ್ತದ ದಾಸತ್ವದೊಳಗಿಂದ ಹೊರತರಲು ಮೋಶೆಯನ್ನು ಕರೆದಾಗ ಸೀನಾಯಿ ಬೆಟ್ಟದ ಬಳಿಯಲ್ಲಿ ದೇವರು ಮೋಶೆಗೆ ಪ್ರಕಟಿಸಿದ ಹೆಸರು ಇದಾಗಿದೆ. "... ಇದು ಸದಾಕಾಲಕ್ಕೂ ನನ್ನ ಹೆಸರುಣಿ ಇದು ತಲತಲಾಂತರಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ" (ವಿಮೋಚನಕಾಂಡ 3:15) ಎಂದು ಕರ್ತನು ಮೋಶೆಗೆ ಹೇಳಿದನು.

"ಯಾಹ್ವೆ" (Yahweh) ಎಂಬ ಹೆಸರು "YHWH" ಎಂಬ ನಾಲ್ಕು ಹಿಬ್ರೂ ಅಕ್ಷರಗಳನ್ನು ಭಾಷಾಂತರಿಸುವ ಪ್ರಯತ್ನವಾಗಿದೆ. ಈ ಅಕ್ಷರಗಳು ಭಿನ್ನವಾದ ರೀತಿಯಲ್ಲಿ ಇಂಗ್ಲಿಷ್ ಭಾಷಾಂತರಗಳಲ್ಲಿ ತರಲ್ಪಟ್ಟಿವೆ. ಕಿಂಗ್ ಜೇಮ್ಸ್ ಆವೃತ್ತಿ, ರಿವೈಜ್ಡ್ ಸ್ಟಾಂಡರ್ಡ್ ಆವೃತ್ತಿ, ಹಾಗೂ ನ್ಯೂ ಅಮೇರಿಕನ್ ಸ್ಟಾಂಡರ್ಡ್ ಬೈಬಲ್ (updated ಆವೃತ್ತಿ) "LORD" ಪದವನ್ನು ಉಪಯೋಗಿಸುತ್ತವೆ. ಅಮೇರಿಕನ್ ಸ್ಟಾಂಡಡ್ ಆವೃತ್ತಿಯು "ಯೆಹೋವ" ಎಂಬ ಪದವನ್ನು ಉಪಯೋಗಿಸುತ್ತದೆ. ಹೆಚ್ಚಾದ ಬೈಬಲ್ ಪಂಡಿತರು "ಯಾಹ್ವೆ" ಎಂಬುದು ಸರಿಯಾದ ಭಾಷಾಂತರ ಎಂದು ಯೋಚಿಸುತ್ತಾರೆ. ದೇವರ ವೈಯಕ್ತಿಕ ಹೆಸರಿನ ಪ್ರತಿನಿಧಿಸುವಿಕೆಯು (ವಿಮೋಚನಕಾಂಡ 3:15) ದೈವತ್ವದ ಇತರ ಅಂಕಿತಗಳಿಗಿಂತ ಹೆಚ್ಚು ಸಲ ಬರುತ್ತದೆಣಿ ಹಳೇ ಒಡಂಬಡಿಕೆಯಲ್ಲಿ ಸುಮಾರು 6,823 ಸಲ ಕಂಡು ಬರುತ್ತದೆ. ಇತರ ವಿವಿಧ ಪದಗಳು "ಯಾಹ್ವೆ" ಎಂಬುದರೊಂದಿಗೆ ಸಂಯುಕ್ತವಾಗಿ ಉಪಯೋಗಿಸಲ್ಪಡುವಾಗ, ಈ ಹೆಸರಿಗೆ ಹೆಚ್ಚಿನ ಅರ್ಥವನ್ನು ತರುತ್ತವೆ.

## *YAHWEH 'ELOHIM:* "ಯೆಹೋವ ದೇವರು"

### "ಯಾಹ್ವೆ" ಎಂಬುದರ ಬೈಬಲಿನ ಮೊದಲನೆಯ ಉಪಯೋಗ

ದೈವತ್ವದ ವಿವರಣೆಯಲ್ಲಿ "ಯಾಹ್ವೆ" ಎಂಬ ಪದದ ಮೊದಲನೆಯ ಕಂಡುಬರುವಿಕೆಯು *'Elohim* ಎಂಬ ಪದದೊಂದಿಗೆ ಬರುತ್ತದೆ. ಇದನ್ನು ಹಿಂದಿನ ಪಾಠದಲ್ಲಿ ಪರೀಕ್ಷೆ ಮಾಡಿದ್ದೇವೆ. "ಯೆಹೋವ ದೇವರು [*Yahweh 'Elohim*] ಭೂಮಿಯನ್ನೂ ಆಕಾಶವನ್ನೂ ಉಂಟುಮಾಡಿದ ದಿನದಲ್ಲಿ ಸೃಷ್ಟಿಸಲ್ಪಟ್ಟ ಆಕಾಶಗಳ ಮತ್ತು ಭೂಮಿಯ ವಿವರಣೆ ಇದಾಗಿದೆ" ಎಂದು ಆದಿಕಾಂಡ 2:4ರಲ್ಲಿ ಓದುತ್ತೇವೆ.

"ದೇವರು" ಎಂಬ ಪದವು ಆದಿಕಾಂಡ 1:1-2:3ರಲ್ಲಿ ಮೋಶೆಯಿಂದ ಮೂವತ್ನಾಲ್ಕು ಸಲ ಉಪಯೋಗಿಸಲ್ಪಟ್ಟಿದೆ. ಆಮೇಲೆ ಅವನು "ಯಾಹ್ವೆ" ಎಂಬ ಹೆಸರನ್ನು ಪರಿಚಯಿಸಿದನು ಮತ್ತು ಹತ್ತೊಂಭತ್ತು ಸಲ "ದೇವರು" ಎಂಬ ಪದದೊಂದಿಗೆ ಅದನ್ನು ಕೂಡಿಸಿ ಆದಿಕಾಂಡ 2:4-3:24ರಲ್ಲಿ ಉಪಯೋಗಿಸಿದನು. "ದೇವರು" ಎಂದು ಹೇಳುವದರಿಂದ "ಕರ್ತನಾದ ದೇವರು" ಎಂದು ಹೇಳುವದಕ್ಕೆ ಕೂಡಲೇ ಹಾಗೂ ಸಂಪೂರ್ಣವಾಗಿ ಬದಲಾದದ್ದು ಇಬ್ಬರು ರಚನಕಾರರನ್ನು ಸೂಚಿಸುತ್ತದೆ ಎಂದು

ಕೆಲವರು ಊಹಿಸುತ್ತಾರೆ. ಅಂಥ ವಿವೇಚನೆಯು ಆದಿಕಾಂಡ ಗ್ರಂಥದ ಐಕ್ಯತೆ ಹಾಗೂ ಪ್ರಾಮಾಣಿಕತೆಗೆ ಧಕ್ಕೆ ತರುತ್ತದೆ. ಮೋಶೆಯು ಪಂಚ ಗ್ರಂಥಗಳ ರಚನಕಾರನೆಂಬ ಯೇಸುವಿನ ಹೇಳಿಕೆಗೆ ಅಗೌರವವನ್ನು ತೋರಿಸುತ್ತದೆ (ಯೋಹಾನ 5:46, 47). ಅವು ಕಂಡುಬರುವಂತೆ - ಆತನ ಹೆಸರುಗಳು ಬರೆಯಲ್ಪಟ್ಟಿರುವದರಲ್ಲಿ ದೇವರಿಗೆ ಒಂದು ಉದ್ದೇಶವಿತ್ತೆಂದು ಭಾವಿಸುವದರಲ್ಲಿ ಹೆಚ್ಚು ಭಕ್ತಿಯಿರುತ್ತದೆ.

ದೈವಿಕ ಉದ್ದೇಶವು ಸ್ಪಷ್ಟಪಡಿಸಲ್ಪಟ್ಟಿರುವದಿಲ್ಲ, ಆದರೆ "Yahweh," ದೇವರ ವೈಯಕ್ತಿಕ ಹೆಸರಿನ ಮೊದಲನೆಯ ಉಪಯೋಗವು ದೇವರ ಮತ್ತು ಮಾನವನ ಮಧ್ಯದಲ್ಲಿಯ, ಯಾಹ್ವೆ ಮತ್ತು ಆದಾಮನ ಮಧ್ಯದಲ್ಲಿಯ ವೈಯಕ್ತಿಕ ಸಂಬಂಧಗಳ ಹಿನ್ನೆಲೆಯಲ್ಲಿ ಬರುತ್ತದೆ. ಆದಾಮನ ಮೂಗಿನ ಹೊಳ್ಳೆಗಳೊಳಗೆ ಯಾಹ್ವೆ ಉಸಿರುವುದರ, ತೋಟವನ್ನು ಸೃಷ್ಟಿಸುವ, ತೋಟದಲ್ಲಿ ನಡೆದಾಡುವ, ಹವ್ವಳನ್ನು ಉಂಟುಮಾಡುವ ಮತ್ತು ಆದಾಮ ಹಾಗೂ ಹವ್ವಳೊಂದಿಗೆ ನೇರವಾದ ಸಂಭಾಷಣೆಯಿರುವದನ್ನು ಆದಿಕಾಂಡ 2 ಹೇಳುತ್ತದೆ. ಜಾಗರೂಕತೆಯಿಂದ ಬರೆಯಲ್ಪಟ್ಟ ಬೈಬಲು ನಿಖರವಾಗಿ ಸರಿಯಾದ ಸ್ಥಳಗಳಲ್ಲಿ ದೈವತ್ವದ ಬಹಳ ಯೋಗ್ಯವಾದ ವಿವರಣೆಗಳನ್ನು ಉಪಯೋಗಿಸುವುದು ಯೋಗ್ಯವಾದದ್ದಾಗಿ ತೋರುತ್ತದೆ.

**"ಯಾಹ್ವೆ"ದ ಅರ್ಥದ ಪ್ರಕಟನೆ**

ಕೆಲವೊಂದು ಕಾರಣಕ್ಕಾಗಿ "ಯಾಹ್ವೆ" ಹೆಸರಿನ ಪೂರ್ಣ ಅರ್ಥವನ್ನು ಪ್ರಕಟಿಸಲು ಆದಾಮನ ಸಮಯದ ನಂತರ ನೂರಾರು ವರ್ಷಗಳವರೆಗೆ ದೇವರು ಕಾದುಕೊಂಡಿದ್ದನು, ಪುರಾತನರಲ್ಲಿ[1] ಅದು ಹೆಚ್ಚಾದ ಉಪಯೋಗದಲ್ಲಿದ್ದರೂ ಈ ಹೆಸರಿನ ಅರ್ಥವು ಹೋರೇಬ್ ಬೆಟ್ಟದಲ್ಲಿ ಉರಿಯುವ ಪೊದೆಯೊಳಗೆ ಕರ್ತನು ಮೋಶೆಯೊಂದಿಗೆ ಮಾತಾಡುವವರೆಗೆ ಸಂಪೂರ್ಣವಾಗಿ ಆತನಿಂದ ಪ್ರಕಟಿಸಲ್ಪಡಲಿಲ್ಲ. ಅರೇಬಿಯವನ್ನು ಬಿಡಲು ಮತ್ತು ಇಸ್ರಾಯೇಲ್ಯರನ್ನು ಐಗುಪ್ತ ದೇಶದಿಂದ ಹೊರಗೆ ನಡಿಸಲು ಮೋಶೆಯು ನೇಮಿ ಸಲ್ಪಟ್ಟಾಗ, ದೇವರ ಹೆಸರನ್ನು ತಿಳಿದು ಕೊಳ್ಳಲಿಕ್ಕೆ ಇಸ್ರಾಯೇಲ್ಯರು ಬಯಸಿದರೆಂದು ಅವನು ಕರ್ತನಿಗೆ ಹೇಳಿದನು. ಆಮೇಲೆ ದೇವರು "ಯಾಹ್ವೆ" ಹೆಸರನ್ನು ಸ್ಪಷ್ಟಪಡಿಸಿದನು (ವಿಮೋಚನಕಾಂಡ 3:15). "ಸ್ವಯಂ ಅಸ್ತಿತ್ವದಲ್ಲಿರುವ ಒಬ್ಬಾತನು" ಎಂದು ಅದರ ಅರ್ಥವನ್ನು ವಿವರಿಸಿದನು. "ನಾನು ಇರುವಾತನೇ ಆಗಿದ್ದೇನೆ" (ವಿಮೋಚನಕಾಂಡ 3:14) ಇಲ್ಲವೇ "ನಾನು ಅಸ್ತಿತ್ವದಲ್ಲಿರುವದರಿಂದ ನಾನು ಅಸ್ತಿತ್ವದಲ್ಲಿರುತ್ತೇನೆ."

ದೇವರಿಗೆ ಸಮೀಪವಾಗಿದ್ದ ಪಿತೃಗಳಿಗೂ ಸಹ ದೇವರ ಹೆಸರಿನ ಅಂಥ ನಿರ್ವಚನೆಯ ಅವಕಾಶ ಕೊಡಲ್ಪಡಲಿಲ್ಲ. *'El Shaddai,* "ಸರ್ವಶಕ್ತ ದೇವರು" ಎಂಬ ಮಾತಿನೊಂದಿಗೆ ಅವರು ಬಹಳ ಪರಿಚಿತರಾಗಿದ್ದರು. "ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡೆನೇ ಹೊರತು ಯೆಹೋವ ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ" ಎಂದು ದೇವರು ಹೇಳಿದರು (ವಿಮೋಚ ನಕಾಂಡ 6:3). ಈ ಸಂದರ್ಭದಲ್ಲಿ ಮೋಶೆಯ ಬೇಡಿಕೆಯನ್ನು ನೆರವೇರಿಸಲು ಮತ್ತು ಇಸ್ರಾಯೇಲ್ಯರಲ್ಲಿ ನಂಬಿಕೆಯನ್ನು ಹುಟ್ಟಿಸಲು ದೇವರು ಮೊದಲನೆಯ ಸಲ ತನ್ನ ಹೆಸರನ್ನು ಸಂಪೂರ್ಣವಾಗಿ ಪ್ರಕಟಿಸಿದನು.

"ಯಾಹ್ವೆ" ಹೆಸರಿನ ನಿರೂಪಣೆಯು ಮೋಶೆಗೂ ಇಸ್ರಾಯೇಲ್ಯರಿಗೂ ಸ್ಪಷ್ಟವಾಗಿ ಕೊಡಲ್ಪಟ್ಟಿತ್ತು. ಅದು ದೇವರ ಆಳವಾದ ಸಂಗತಿಗಳಿಗೆ ಒಳಪಟ್ಟಿತ್ತು. ಹುಟ್ಟಿಸುವವನಿಲ್ಲದ ವ್ಯಕ್ತಿಯ ಸ್ವಭಾವವನ್ನು ಯಾವ ಮಾನವನೂ ಗ್ರಹಿಸಿಕೊಳ್ಳರಾರನು. ಒಬ್ಬ ವ್ಯಕ್ತಿಯು ಪ್ರಾರಂಭವಿಲ್ಲದವನಾಗಿ ಹೇಗೆ ಅಸ್ತಿತ್ವದಲ್ಲಿರ ಬಹುದು, ಜೀವಿಯಾಗಿರಲು ಒಬ್ಬಾತನು

ಹೇಗೆ ತನ್ನ ಸ್ವಂತ ಕಾರಣವಾಗುವನು ಎಂಬುದನ್ನು ಯಾವುದೇ ಮಾನವನು ವಿವರಿಸಲಾರನು. ಬೇರೇ ಪ್ರತಿಯೊಂದಕ್ಕೂ ಕಾರಣವಿರತಕ್ಕದ್ದುಣಿ ಆದರೆ ದೇವರಿಗೆ ಯಾವ ಕಾರಣವಿರಲಿಲ್ಲ. ಆತನು ಕಾರಣವಾಗದ ಕಾರಣವಾಗಿದ್ದಾನೆ.

ದೇವರು ಇರುವಂತೆ ಹೇಗೆ ಬಂದನು ಎಂದು ಒಂದು ಮಗುವು ತನ್ನ ತಂದೆಗೆ ಕೇಳುವಾಗ, ಅದು ತನ್ನ ತಂದೆಯು ಉತ್ತರ ಕೊಡಲಾಗದ ಪ್ರಶ್ನೆಯನ್ನು ಕೇಳುತ್ತದೆ. "ಆತನು ದೇವರಾಗಿರುವ ಕಾರಣದಿಂದ" ಎಂದು ತಂದೆಯು ಉತ್ತರ ಕೊಡುವಾಗ, ಅವನು ತನಗೆ ಸಾಧ್ಯವಾದದಷ್ಟು ಹಿಂದೆ, ಮೋಶೆಯೊಂದಿಗೆ ದೇವರು ಹೋದಷ್ಟು ಹಿಂದೆ ಹೋಗಿದ್ದಾನೆ. ದೇವರ ಹೇಳಿಕೆಯು ಹೀಗಿರಬೇಕು: "ನಾನು ಅಸ್ತಿತ್ವದಲ್ಲಿರುವದರಿಂದ ಅಸ್ತಿತ್ವದಲ್ಲಿರುತ್ತೇನೆ. ನಾನು ಯಾರು ಆಗಿರುವೆನೋ ಅವನಾಗಿರುವದರಿಂದ ನಾನು ಅಸ್ತಿತ್ವದಲ್ಲಿದ್ದೇನೆ." ದೈವತ್ವದ ಸ್ವಭಾವವೇ ಸ್ವಯಂ - ಅಸ್ತಿತ್ವವಾಗಿದೆ. ಇದನ್ನು ವಿವರಿಸಲಿಕ್ಕಾಗುವದಿಲ್ಲಣಿ ಇದು ವಿಶ್ವಾಸದಿಂದ ಸ್ವೀಕರಿಸಲ್ಪಡತಕ್ಕದ್ದು. ದೇವರ ಬಳಿಗೆ ಬರುವವನು ಆತನು ಇದ್ದಾನೆ ಎಂದು ನಂಬತಕ್ಕದ್ದು (ಇಬ್ರಿಯ 11:6), ಆದರೆ ಆತನು ಯಾಕೆ ಮತ್ತು ಹೇಗೆ ಅಸ್ತಿತ್ವದಲ್ಲಿರುವನೆಂಬುದನ್ನು ತಿಳಿಯಲಾರನು.

ದೇವರು ಹೇಗೆ ಇರುವಂತೆ ಬಂದನು ಎಂಬುದನ್ನು ಇಸ್ರಾಯೇಲ್ಯರು ತಿಳಿಯದವರಾಗಿದ್ದರು. ಆದರೆ ಅವರು ಮೋಶೆಯ ಮಾತು ಕೇಳಿದರು. ಅವನ ಅದ್ಭುತ ಕಾರ್ಯಗಳನ್ನು ನೋಡಿದರು. ದೇವರು ಅಸ್ತಿತ್ವದಲ್ಲಿರುವನು, ಆತನು ಅಸ್ತಿತ್ವದಲ್ಲಿರುವವನು ಎಂದು ನಂಬಿದರು. ಆಗ ಅವರು ತಲೆಬಾಗಿ ಆರಾಧಿಸಿದರು (ವಿಮೋಚನಕಾಂಡ 4:31). ಹಾಗೆಯೇ ದೇವರು ಹೇಗೆ ಅಸ್ತಿತ್ವಕ್ಕೆ ಬಂದನು ಎಂಬುದನ್ನು ನಾವು ತಿಳಿಯಲಾರೆವುಣಿ ಆದರೆ ನಾವು ಜೀವದ ಕೃಪೆಯನ್ನು ಮೆಚ್ಚಿಕೊಂಡರೆ, ಯಾರಲ್ಲಿ ನಾವು ಜೀವಿಸುವೆವೋ, ಹಾಗೂ ಚಲಿಸುತ್ತೇವೆಯೋ, ಮತ್ತು ನಮ್ಮ ಜೀವವಿರುವುದೋ, ಹಾಗೂ ಯಾರಿಂದ ಎಲ್ಲಾ ಆಶೀರ್ವಾದಗಳು ಬರುವವೋ ಆತನನ್ನು ನಾವು ಒಪ್ಪಿಕೊಳ್ಳುವೆವು. ಆತನಿಗೆ ಕೃತಜ್ಞತೆ ಸಲ್ಲಿಸುವೆವು ಮತ್ತು ಆತನ ಸೇವೆ ಮಾಡುವೆವು.

**ಯೇಸುವು ಯಾಹ್ವೆ ಆಗಿದ್ದಾನೆ**

ನಜರೇತಿನ ಯೇಸು ಮಾನವರಿಗಿಂತ ಹೆಚ್ಚಾಗಿದ್ದಾನೆ ಎಂಬ ಭಾವನೆಯು ರೋಮಾಂಚನಕಾರಿಯಾದದ್ದಾಗಿದೆ. ದೈಹಿಕವಾಗಿ ಆತನು ಯೆಹೂದಿ ವಂಶದ ಮರ್ತ್ಯಮಾನವನಾಗಿದ್ದರೂ ಆತನು - ಇತರ ಯಾವುದೇ ಮಾನವರಂತಿರದೇ - ತನ್ನ ಬೇತ್ಲೆಹೇಮ ಆಗಮನಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದನು. ಅಬ್ರಾಮನಿಗಿಂತ ಮೊದಲು, ಬೇತ್ಲೆಹೇಮಿನಲ್ಲಿ ಜನಿಸುವದಕ್ಕಿಂತ ಸುಮಾರು ಎರಡು ಸಾವಿರ ವರ್ಷಗಳ ಮೊದಲು ಯೇಸುವು ದೇವರಾಗಿದ್ದ ಲೋಗೊಸ್, ವಾಕ್ಯವು, ಅಸ್ತಿತ್ವದಲ್ಲಿದ್ದನು (ಯೋಹಾನ 1:1-3). "ನಾನು ಇರುವಾತನು" ಎಂದು ದೇವರು ತನ್ನನ್ನು ಮೋಶೆಗೆ ಗುರುತಿಸಿಕೊಂಡಾಗ ಆತನು ಉಪಯೋಗಿಸಿದ್ದ ಭಾಷೆಯನ್ನೇ, ಯೆರೂಸಲೇಮಿನಲ್ಲಿ ಯೆಹೂದ್ಯರೊಂದಿಗೆ ಮಾತಾಡುವಾಗ ತನ್ನ ಬಗ್ಗೆ ಯೇಸುವು ಉಪಯೋಗಿಸಿದನು (ಯೋಹಾನ 8:58).

ಅಬ್ರಹಾಮನಿಗಿಂತ ಬಹಳ ಮೊದಲಿನ ಸಮಯದಲ್ಲಿ ಯೇಸುವು, "ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದ" ಒಬ್ಬಾತನು ಎಂದು ವಿವರಿಸಲ್ಪಟ್ಟಿದ್ದಾನೆ (ಮೀಕ 5:2). ಆದುದರಿಂದ ಲೋಕದೊಳಗೆ ಯಾಹ್ವೆ (ಯೆಶಾಯ 40:3) ಬರುವನೆಂಬ ಬೈಬಲಿನ ಬೋಧನೆಯು ತಿಳಿದುಕೊಳ್ಳಲ್ಪಡುವಂಥದ್ದು ಆಗಿದೆ. ಇಗೋ, ಆತನು ಯೇಸು! (ನೋಡಿರಿ ಮತ್ತಾಯ 3:3.) ಯೇಸು ಕ್ರಿಸ್ತನು ತನ್ನ ತಂದೆಯ ಸ್ವಭಾವವುಳ್ಳವನಾಗಿದ್ದಾನೆ. ಆತನು ಯಾವುದೇ ಕಡಿಮೆಯುಳ್ಳ ದೇವರಲ್ಲ.

ಯಾವುದೇ ಕಡಿಮೆ ಯಾಹ್ವೆಯಲ್ಲ, ಆತನು ಸ್ವಯಂ ಅಸ್ತಿತ್ವದಲ್ಲಿರುವಾತನು. ಆತನಲ್ಲಿ ಭರವಸೆಯಿಡುವವನು ಹಾಗೂ ಯಾರಿಗೆ ಯಾಹ್ವೆ ನಿರೀಕ್ಷೆಯಾಗಿರುವನೋ ಅವರು ಧನ್ಯರು. (ನೋಡಿರಿ ಕೀರ್ತನೆ 146:5.)

## *'ADONAI YAHWEH:* **"ಕರ್ತನಾದ ಯೆಹೋವ "**

ಮೊದಲು ದಾಖಲೆಯಾದ ಸಮಯದಲ್ಲಿ ದೈವತ್ವವು "ಕರ್ತನು" ಇಲ್ಲವೇ "ಯಜಮಾನನು" ಎಂದು ವಿವರಿಸಿದ್ದು ಆದಿಕಾಂಡ 15:2ರಲ್ಲಿ ಕಂಡು ಬರುತ್ತದೆ. ಅಬ್ರಾಮನು ದೇವರನ್ನು *'Adonai Yahweh* ಅಂದರೆ "ಕರ್ತನಾದ ಯೆಹೋವನೇ" ಎಂದು ಸಂಬೋಧಿಸಿದನು.

*'Elohim* ಬಹುವಚನ ರೂಪವು ಗೌರವವನ್ನು ಅಧಿಕಾರವನ್ನು ಪ್ರತಿಬಿಂಬಿಸುವದಕ್ಕಾಗಿ ಉಪಯೋಗಿಸಲ್ಪಟ್ಟಿದೆ, ಆದರೆ ದೇವರುಗಳ ಬಹು ಸಂಖ್ಯೆಯನ್ನು ಸೂಚಿಸುವದಕ್ಕಾಗಿ ಅಲ್ಲ ಎಂದು ಆಗಲೇ ತೋರಿಸಿದ್ದೇವೆ. ಹಾಗೆಯೇ ಆದಿಕಾಂಡ 15ರಲ್ಲಿ ಅಬ್ರಾಮನು "ಕರ್ತನು" ಎಂಬ ಪದದ ಬಹುವಚನ ರೂಪವನ್ನು ಕರ್ತನೂ ಎಲ್ಲಾ ಸಂಗತಿಗಳ ಒಡೆಯನೂ ಆಗಿರುವಂತೆ ಅರ್ಹವಾದ ಮರ್ಯಾದೆಯನ್ನೂ, ಮಹಿಮೆಯನ್ನೂ, ಗೌರವವನ್ನೂ ಪ್ರತಿಬಿಂಬಿಸುವಂತೆ ಉಪಯೋಗಿಸಿದನು. "ನನ್ನ" ಎಂಬ ಒಡೆತನದ ಸರ್ವನಾಮವನ್ನು ಹಿಬ್ರೂವಿನಲ್ಲಿ ಅಬ್ರಾಮನು ಉಪಯೋಗಿಸುವಲ್ಲಿ ಅವನು ಯಾಹ್ವೆಗೆ ತನ್ನ ಕರ್ತನೂ ಒಡೆಯನೂ ಎಂದು ತನ್ನ ಸಂಪೂರ್ಣ ಸಮರ್ಪಣೆಯನ್ನು ಮಾಡುತ್ತಿರುವದನ್ನು ಸೂಚಿಸುತ್ತದೆ.

ಈ ಸನ್ನಿವೇಶದಲ್ಲಿ ದೇವರು ತಾನು ಅಬ್ರಾಮನಿಗೆ ದಯಪಾಲಿಸುವಾತನು ವಾಗ್ದಾನ ಮಾಡಿದಂತೆ, ಅಬ್ರಾಮನು ಕರ್ತನಾದ ಯಾಹ್ವೆಯು ಸಂಪೂರ್ಣವಾಗಿ ಜವಾಬ್ದಾರಿಕೆಯಲ್ಲಿ ಇರುವನೆಂಬುದನ್ನು ಅರಿತುಕೊಂಡನು. ಸಂತಾನವಿಲ್ಲದ 85 ವರ್ಷದ ಮುದುಕನಿಗೂ ಹಾಗೂ 75 ವರ್ಷದ ಬಂಜೆ ಹೆಂಡತಿಗೂ ಹೇಗೆ ಬಹುಮಾನ ಕೊಡಲ್ಪಡುವುದೆಂದು ಅಬ್ರಾಮನು ದೇವರನ್ನು ಕೇಳಿದನು. ಅಬ್ರಾಮನಿಗೆ ವಿಶ್ವಾಸವಿದ್ದದ್ದು, ರಾತ್ರಿಯಲ್ಲಿ ನಡೆಯುವಾಗ, ನಕ್ಷತ್ರರಾಶಿಗಳಂತೆ ಅಗಣಿತವಾಗಿ ವಂಶಜರನ್ನು ಕೊಡುವನೆಂಬ ದೇವರ ವಾಗ್ದಾನವನ್ನು ಸ್ವೀಕರಿಸಿದ್ದು, ಅಬ್ರಾಮನ ಜೀವನದಲ್ಲಿ ಮತ್ತು ಬೈಬಲಿನ ಚರಿತ್ರೆಯಲ್ಲಿ ಉನ್ನತವಾದ ಸಂಗತಿಯಾಗಿದೆ.

ಯಾವ ಕರ್ತನಾದ ಯೆಹೋವನನ್ನು ಅಬ್ರಹಾಮನು ಆಳವಾಗಿ ನಂಬಿದ್ದನೋ, ಆ ಕರ್ತನಾದ ಯೆಹೋವನಲ್ಲೇ ಅಬ್ರಹಾಮನ ಆತ್ಮಿಕ ಮಕ್ಕಳು ಸಹ ಇಂದು ನಂಬುತ್ತಿದ್ದಾರೆ. ಆತನೇ "ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು. ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು, ನಮ್ಮನ್ನು ನೀತಿವಂತರನ್ನಾಗಿ ನಿರ್ಣಯಿಸಲು ಎಬ್ಬಿಸಿದನು" (ರೋಮಾಪುರ 4:24, 25).

## *YAHWEH YIR'EH:* **"ಯೆಹೋವನು ಒದಗಿಸುವನು"**

ಅನಂತರದಲ್ಲಿ ಅಬ್ರಹಾಮನು ಆದಿಕಾಂಡ 22:14ರಲ್ಲಿ ದೇವರಿಗೆ ಇನ್ನೊಂದು ಹೆಸರನ್ನು ಉಪಯೋಗಿಸಿದನು: *Yahweh Yir'eh,* "ಯೆಹೋವನು ಒದಗಿಸುವನು." ಅಗತ್ಯವಾಗಿರುವಂಥದ್ದನ್ನು ದೇವರು ಒದಗಿಸುವನು ಎಂದು ಅಬ್ರಹಾಮನು ನಂಬಿದನು.

ವಿಶ್ವಾಸದ ಮನುಷ್ಯ, ಅಬ್ರಹಾಮನು ದಹನಬಲಿಗೆ ಬೇಕಾದ ಕುರಿಮರಿಯನ್ನು ದೇವರು ಒದಗಿಸಿಕೊಡುವನು ಎಂದು ಇಸಾಕನಿಗೆ ಹೇಳಿದನು (ಆದಿಕಾಂಡ 22:8).

ಆ ಸಮಯದಲ್ಲಿ ಅಬ್ರಹಾಮನು ಕುರಿಮರಿಯು ಇಸಾಕನೇ ಎಂದು ಯೋಚಿಸಿದ್ದನು. ದೇವರು ಒಂದು ಕುರಿಮರಿಯನ್ನು ಒದಗಿಸಿ ಇಸಾಕನನ್ನು ಉಳಿಸುವನೆಂದು ಅವನು ತಿಳಿದಿರಲಿಲ್ಲ. ದೇವರು ಒದಗಿಸಿದ್ದನ್ನು ನೋಡಿದಾಗ - ದೇವರ ನಡಿಸುವಿಕೆಯನ್ನು ಅವನು ಅನುಭವಿಸಿದಾಗ - ಅಬ್ರಹಾಮನ ಹೃದಯದಲ್ಲಿ ಬಂದ ಆನಂದವು ಅಪಾರವಾಗಿತ್ತು. ಬೆಟ್ಟದ ಮೇಲಿನ ಮರೆಯಲಾಗದ ಸ್ಥಳಕ್ಕೆ ಅಬ್ರಹಾಮನು *Yahweh Yir'eh,* "ಯೆಹೋವನು ಒದಗಿಸುವನು" ಎಂದು ಹೆಸರಿಟ್ಟಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ನೂರಾರು ವರ್ಷಗಳ ನಂತರ ಅಬ್ರಹಾಮನ ವಂಶಜರು ತಮ್ಮ ದೊಡ್ಡ ಪೂರ್ವಜನಾದ ಅಬ್ರಹಾಮನ ದೇವರು ತೋರಿಸಿಕೊಟ್ಟದ್ದರಲ್ಲಿ ಆನಂದಿಸಿದರು. ಸ್ಪಷ್ಟವಾಗಿ, ಒಂದು ಗಾದೇ ಮಾತನ್ನು ಬೆಳಸಿಕೊಂಡರು: "ಯೆಹೋವನ ಪರ್ವತದಲ್ಲಿ ಒದಗಿಸಲ್ಪಡುವುದು." ಅಬ್ರಹಾಮನ ಜೀವನದಲ್ಲಿಯ ಈ ಸ್ಮರಣಾರ್ಥಕವಾದ ಘಟನೆಯು ದೇವರ ಒದಗಿಸುವಿಕೆಯಲ್ಲಿ ಅವನ ವಿಶ್ವಾಸವನ್ನು ಬಲಪಡಿಸಿತುಣಿ ಇತರ ಅನೇಕರ ಭರವಸೆಯನ್ನು ಬಲಪಡಿಸಿತು.

**ಸಾಮಾನ್ಯವಾದ ದೈವಾನುಗ್ರಹ**

ಸಾಮಾನ್ಯವಾಗಿ ಕರ್ತನು ತನ್ನ ಎಲ್ಲಾ ಜೀವಿಗಳಿಗೆ ಒದಗಿಸುವನು, ಆಕಾಶದಿಂದ ಮಳೆ ಸುರಿಸುವನು, ಆಹಾರದಿಂದಲೂ ಸಂತೋಷದಿಂದಲೂ ಅವರ ಹೃದಯಗಳನ್ನು ತೃಪ್ತಿಪಡಿಸುವನು ಎಂಬುದು ಚೆನ್ನಾಗಿ ತಿಳಿಯಲ್ಪಟ್ಟಿದೆ (ಅಪೊಸ್ತಲರ ಕೃತ್ಯ 14:17). ದೇವರು ಪಕ್ಷಿಗಳಿಗೆ ಒದಗಿಸುವನು, ಹೂವುಗಳಿಗೆ ಸೌಂದರ್ಯವನ್ನು ಹೊದಗಿಸುವನು, (ಮತ್ತಾಯ 6:25-32). ಕೃತಜ್ಞತೆಯಿಲ್ಲದವರಿಗೂ ದುಷ್ಟರಿಗೂ ದಯೆಯುಳ್ಳವನಾಗಿರುವಾತನು (ಲೂಕ 6:35) ಕ್ರೈಸ್ತರ ಮೇಲೆಯೂ ಕ್ರೈಸ್ತೇತರರ ಮೇಲೆಯು ಒಂದೇ ರೀತಿಯಲ್ಲಿ ಸೂರ್ಯನು ಉದಯಿಸುವಂತೆ ಮಾಡುತ್ತಾನೆ. ಭಕ್ತನ ಹೊಲದ ಮೇಲೆ ಮಳೆಸುರಿಸುವಂತೆಯೇ ಪಾಪಿಯ ಹೊಲದ ಮೇಲೆಯೂ ಮಳೆ ಸುರಿಸುತ್ತಾನೇ (ಮತ್ತಾಯ 5:45). ಈ ಸಾಮಾನ್ಯವಾದ ಒದಗಿಸುವಿಕೆಯಲ್ಲಿ ಆತನು ಎಲ್ಲಾ ಜನರ ರಕ್ಷಕನಾಗಿದ್ದಾನೆ (1 ತಿಮೊಥೆ 4:10).

**ವಿಶೇಷವಾದ ದೈವಾನುಗ್ರಹ**

*Yahweh Yir'eh*ಯು ಎಲ್ಲಾ ಜನರ ರಕ್ಷಕನು ಮಾತ್ರವೇ ಅಲ್ಲ, "ವಿಶೇಷವಾಗಿ ವಿಶ್ವಾಸಿಗಳಿಗೆ" ರಕ್ಷಕನು ಆಗಿದ್ದಾನೆ (1 ತಿಮೊಥೆ 4:10). ನೀತಿಗೆ ಸಮರ್ಪಿಸಿಕೊಂಡವರ ಅಗತ್ಯತೆಗಳನ್ನು ದೇವರು ಮುಂಚಿತವಾಗಿ ನೋಡುತ್ತಾನೆ ಮತ್ತು ಅವರಿಗೆ ವಿಶೇಷವಾದ ರೀತಿಯಲ್ಲಿ ಒದಗಿಸುತ್ತಾನೆ.

ದೇವರು ಬೈಬಲಿನಲ್ಲಿ ನಮ್ಮ ತಂದೆ ಎಂದು ಪ್ರತಿನಿಧಿಕರಿಸಲ್ಪಟ್ಟಿರುವದರಿಂದ, ಆತನ ವಿಶೇಷ ಅನುಗ್ರಹವನ್ನು ಅರ್ಥಮಾಡಿಕೊಳ್ಳತಕ್ಕದ್ದು. ಬ್ಯಾಂಕ್ ಅಕೌಂಟ ಇಟ್ಟು ಆಮೇಲೆ ಮರೆಯಾಗಿ ಹೋಗುವಂಥವನ ರೀತಿಯು ತನ್ನ ಮಕ್ಕಳಿಗೆ ಮಾತ್ರ ಯಾವ ಯೋಗ್ಯ ತಂದೆಯೂ ಒದಗಿಸುವದಿಲ್ಲ. ಭೂಲೋಕದ ಒಳ್ಳೆಯ ತಂದೆಗಳು ಪರಲೋಕದ ತಂದೆಯಷ್ಟು ಒಳ್ಳೆಯವರಾಗಿರುವದಿಲ್ಲ. ಆದರೆ ಅವರೂ ಸಹ ತಮ್ಮ ಮಕ್ಕಳಲ್ಲಿ ಪ್ರತಿಯೊಂದಕ್ಕೆ ವೈಯಕ್ತಿಕ ಗಮನ ಕೊಡುವಲ್ಲಿ ಆನಂದಿಸುವರು.

*ಕೆಲವು ಸಲ ಸಮೃದ್ಧಿಯು ಒದಗಿಸಿಕೊಡಲ್ಪಡುತ್ತದೆ.* ಕ್ರೈಸ್ತರಿಗೆ ವಿಶೇಷ ಒದಗಿಸುವಿಕೆಯೆಂದರೆ ಕೆಲವು ಸಲ ಹೆಚ್ಚಿನ ಮೊತ್ತದ ಪೇ ಚೆಕ್ಕುಗಳು. ಯೆಹೋವನು

ಸದ್ಭಕ್ತರಿಂದ ಯಾವ ಶುಭವನ್ನೂ ಹಿಂದಿಟ್ಟು ಕೊಳ್ಳುವದಿಲ್ಲ (ಕೀರ್ತನೆ 84:11). ಕ್ರೈಸ್ತರು ಸಮೃದ್ಧಿಯನ್ನು ನೀತಿವಂತಿಕೆಯಿಂದ ಸ್ವೀಕರಿಸಿದರೆ, ಅದನ್ನು ದೇವರ ಮಹಿಮೆಗಾಗಿ ಉಪಯೋಗಿಸಿದರೆ *Yahweh Yir'eh* ಸಕಲವಿಧವಾದ ವರಗಳನ್ನು ಧಾರಾಳವಾಗಿ ಅನುಗ್ರಹಿಸುವನು (2 ಕೊರಿಂಥ 9:8). "ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸುವಾತನು ನಿಮಗೂ ಬಿತ್ತುವದಕ್ಕೆ ಬೀಜವನ್ನು ಕೊಟ್ಟು ಹೆಚ್ಚಿಸಿ ನಿಮ್ಮ ನೀತಿಯ ಫಲವನ್ನು ವೃದ್ಧಿಪಡಿಸುವನು" (2 ಕೊರಿಂಥ 9:10).

*ಕೆಲವು ಸಲ ಕಷ್ಟವು ಒದಗಿಸಲ್ಪಡುತ್ತದೆ.* ದೇವರ ವಿಶೇಷ ಕಟಾಕ್ಷ ಕಷ್ಟವೆಂದೂ ಅರ್ಥ ವಾಗುವುದು. ಕೆಲವು ಸಲ ಎಲ್ಲಾ ಜನರ ಅಗತ್ಯತೆಗಳನ್ನು ಆತನು ಬಲ್ಲಾತನಾಗಿರುತ್ತಾನೆ. ತನ್ನ ಜ್ಞಾನ ಮತ್ತು ಪ್ರೀತಿಯಲ್ಲಿ ತನ್ನ ಭಕ್ತರಿಗೆ ಒಳ್ಳೆಯದಾಗಿರದ ಸಂಗತಿಗಳು ಸಿಗದಂತೆ ನೋಡುತ್ತಾನೆ. ದಾವೀದನು ನೀತಿವಂತನು ಭಿಕ್ಷೆಬೇಡಿ ತಿನ್ನುವದನ್ನು ನೋಡಲಿಲ್ಲ (ಕೀರ್ತನೆ 37:25, 26). ಆದರೆ ಯೇಸು ನೋಡಿದನು (ಲೂಕ 16:19-31), ಕೆಲವು ಸಲ ಅತ್ಯುತ್ತಮ ಜನರೂ ಶಿಕ್ಷಿಸಲ್ಪಡುವ ಅಗತ್ಯತೆಯಿರುತ್ತದೆ (ಇಬ್ರಿಯ 12:2-6, 11). ನಮ್ಮ ತಂದೆಯು ಪ್ರೀತಿಸುವಂತೆ ಪ್ರೀತಿಸುವರಿಂದ ಸೇವಾಚರಣೆಯಂತೆ ಶಿಕ್ಷಿಸಲ್ಪಡುವದನ್ನು ಸ್ವೀಕರಿಸುವವನು ಧನ್ಯನು. ತಂದೆಯ ಜೋಪಾಸನೆಯಲ್ಲಿ ಮಿತಿಯಿಲ್ಲದ ಭರವಸೆಯಿದ್ದ ಮಗುವಿನಂತೆ ಪೌಲನು ದೇವರು ಒದಗಿಸಿದ್ದನ್ನು ತನ್ನ ಒಳ್ಳೆಯದಕ್ಕಾಗಿ ಗಂಭೀರತೆಯಿಂದ ಸ್ವೀಕರಿಸಿದನು:

> ಕೊರತೆಯಲ್ಲಿದ್ದೇನೆಂದು ಸೂಚಿಸುವದಕ್ಕೆ ನಾನು ಇದನ್ನು ಹೇಳುವದಿಲ್ಲ, ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತು ಕೊಂಡಿದ್ದೇನೆ. ಬಡವನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನುಣಿ ನಾನು ತೃಪ್ತನಾಗಿದ್ದರೂ ಹಸಿದವನಾಗಿದ್ದರೂ, ಸಮೃದ್ಧಿಯುಳ್ಳ ವನಾದರೂ ಕೊರತೆಯುಳ್ಳವನಾದರೂ, ಯಾವುದೇ ಪರಸ್ಥಿತಿಯಲ್ಲಿಯೂ ಸಂತೃಪ್ತನಾಗಿರುವುದರ ಗುಟ್ಟು ನನಗೆ ತಿಳಿದದೆ (ಫಿಲಿಪ್ಪಿ 4:11, 12).

ಪೌಲನ ಸಾಮರ್ಥ್ಯ ಹಾಗೂ ಪ್ರಸಂಗಿಸುವ ಅಪೇಕ್ಷೆಯುಳ್ಳ ಮನುಷ್ಯನಂಥವನು ಎರಡು ವರ್ಷಗಳ ಸರಪಣಿಗಳಲ್ಲಿ ಸೆರೆಮನೆಯಲ್ಲಿರುವಂಥದ್ದರಿಂದ ಬಹಳವಾಗಿ ನಿರ್ಬಂಧಿಸಲ್ಪಟ್ಟಿರುವನೆಂದು ಭಾವಿಸಿರಬೇಕು. ಹೀಗಿದ್ದರೂ, ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ (ರೋಮಾಪುರ 8:28) ಎಂದು ಬರೆದವನು ತನ್ನ ಸೆರೆಮನೆವಾಸದಿಂದ ಒಳ್ಳೆಯದು ಬರುವದನ್ನು ನೋಡಲು ಜೀವಿಸಿದನು.

> ಸಹೋದರರೇ, ನನಗೆ ಸಂಭವಿಸಿರುವುದು ಸುವಾರ್ತೆಯ ಅಭಿವೃದ್ಧಿ ಗಾಗಿಯೇ ಪರಿಣಮಿಸಿತೆಂದು ನೀವು ತಿಳಿಯಬೇಕೆಂಬುದಾಗಿ ಅಪೇಕ್ಷಿಸುತ್ತೇನೆ. ಹೇಗೆಂದರೆ ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ ಎಂದು ರಾಜಭವನದಲ್ಲಿಯೂ ಮಿಕ್ಕಾದವರೆಲ್ಲರಿಗೂ ಪ್ರಸಿದ್ಧವಾಯಿತು. ಇದಲ್ಲದೆ ಸಹೋದರರಲ್ಲಿ ಬಹಳ ಜನರು ನನ್ನ ಬೇಡಿಗಳಿಂದಲೇ ಕರ್ತನಲ್ಲಿ ಭರವಸವುಳ್ಳವರಾಗಿ ದೇವರ ವಾಕ್ಯ ವನ್ನು ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯ ಹೊಂದಿದ್ದಾರೆ (ಫಿಲಿಪ್ಪಿ 1:12-14).

ಒಬ್ಬನ ಸಂಗಾತಿಗೆ ಭಯಂಕರ ರೋಗವಿರುವಾಗ, ಇಲ್ಲವೇ ಬೇರೆ ಯಾವುದೇ

ದು  ಖಕರವಾದ ಸಂಗತಿಯು ಕುಟುಂಬಕ್ಕೆ ಬರುವಾಗ, ಹೇಗೋ ಅವರೊಳಗಿಂದ ಒಳ್ಳೆಯದು ಬರುವುದು ಎಂಬುದನ್ನು ನಂಬಲಿಕ್ಕೆ ದೊಡ್ಡ ವಿಶ್ವಾಸ ಬೇಕಾಗುತ್ತದೆ, ಅವನು ಸಹಿಸಿದ ಕಷ್ಟಗಳಿದ್ದರೂ ಪೌಲನು ಯಾವುದೇ ಪರಿಸ್ಥಿತಿಯಿಂದ ಒಳ್ಳೆಯದು ಬರುವಂತೆ ದೇವರು ಮಾಡುವನೆಂದು ನಂಬಿದ್ದನು. ತನ್ನ ಸ್ವಂತ ಜೀವಿತದಲ್ಲಿ ಅದು ಘಟಿಸುವದನ್ನು ನೋಡಲು ಹೆಚ್ಚು ಕಾಲ ಜೀವಿಸಿದನು. ಇತರ ಕೆಲವರು ಅಷ್ಟು ದೀರ್ಘ ಕಾಲ ಜೀವಿಸುವದಿಲ್ಲ, ಆದರೆ ಯೇಸುವನ್ನು ನಿಜವಾಗಿ ಪ್ರೀತಿಸುವವರಿಗೆ ಒಳ್ಳೆಯದಕ್ಕಾಗಿ ಎಲ್ಲಾ ಸಂಗತಿಗಳು ಸಹಕರಿಸುವವು ಎಂಬ ನಂಬಿಕೆಯಲ್ಲಿ ಅವರು ಸಾಯುವರು!

*ಕೆಲವು ಸಲ ಶೋಧನೆಗಳು ತೆಗೆದು ಹಾಕಲ್ಪಡುತ್ತವೆ.* ಕ್ರೈಸ್ತರ ಮೇಲೆ ವಿಶೇಷ ದೈವ ಕಟಾಕ್ಷವು ಅಪವಾದಿಯನ್ನು ದೂರದ ಅಂತರದಲ್ಲಿ ಇಡುವದನ್ನು ಒಳಗೊಂಡಿರುತ್ತದೆ. ನಮ್ಮನ್ನು ಕಾಯುತ್ತಿರುವ ದೇವರು, ಪ್ರತಿಯೊಬ್ಬ ವ್ಯಕ್ತಿಯ ಕಡೆಗೆ ಕೊಡುವ ಗಮನವು ಅವಲಂಭನೆಗೆ ಯೋಗ್ಯವಾಗಿದೆಣಿ ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಮೀರಿ ಶೋಧಿ ಸಲ್ಪಡುವದಕ್ಕೆ ಆತನು ಕ್ರೈಸ್ತರನ್ನು ಬಿಡುವದಿಲ್ಲ. ಆದುದರಿಂದ ತಪ್ಪಿಸಿಕೊಳ್ಳುವ ಮಾರ್ಗವು ಯಾವಾಗಲೂ ತೆರೆದಿರುವಂತೆ ಆತನು ನೋಡಿಕೊಳ್ಳುವನು (1 ಕೊರಿಂಥ 10:13). ವಿರೋಧಿಸಲು ಇಲ್ಲವೇ ತಪ್ಪಿಸಿಕೊಳ್ಳಲು ಆತನು ಕ್ರೈಸ್ತನಿಗೆ ಒತ್ತಾಯ ಮಾಡುವದಿಲ್ಲಣಿ ಆ ಕಾರ್ಯಗಳು ಪ್ರತಿಯೊಬ್ಬ ಶಿಷ್ಯನಿಗೆ ಬಿಡಲ್ಪಟ್ಟಿವೆ (ಯಾಕೋಬ 4:7)ಣಿ ಆದರೆ ಎದುರಿಸಲು ಇಲ್ಲವೇ ತಪ್ಪಿಸಿಕೊಳ್ಳಲು ಶಕ್ತಿಯು ಲಭ್ಯವಿರುವಂತೆ ನೋಡಿ ಕೊಳ್ಳುತ್ತಾನೆ. ನಾವಿದನ್ನು ವಾಡಿಕೆಯಾಗಿ ಮಾಡಲ್ಪಟ್ಟ ದೈವ ಕಟಾಕ್ಷವೆಂದು ಕರೆಯುತ್ತೇವೆ: ಪ್ರತಿಯೊಂದು ಶೋಧನೆಯು ಮನುಷ್ಯನ ವೈಯಕ್ತಿಕ ಅಳತೆಗಳಿಗೆ ತಕ್ಕಂತೆ ಮಾಡಲ್ಪಡುತ್ತದೆ.

**ವಿಶೇಷವಾದ ದೈವಾನುಗ್ರಹವು ಅದ್ಭುತಕರವಾದದ್ದಾಗಿರ ಬೇಕಾಗಿರುವದಿಲ್ಲ**

ದೇವರು *Yahweh Yir'eh*ಯಂತೆ, ಆಗಾಗ ಅದ್ಭುತವಾದ ರೀತಿಯಲ್ಲಿ ಮಧ್ಯೆ ಪ್ರವೇಶಿ ಸಿದ್ದರೂ ಆತನ ದೈವ ಕಟಾಕ್ಷದ ಹಸ್ತವು ಅದ್ಭುತಗಳಿಗೆ ಮಿತಿಗೊಳಿಸಲ್ಪಟ್ಟಿರುವದಿಲ್ಲ. ಆತನ ಭಕ್ತರು ತಮಗೆ ಅಗತ್ಯವಾದದ್ದನ್ನು ಕಂಡುಕೊಳ್ಳುವಂತೆಯೂ ಅವರಿಗೆ ಅಗತ್ಯವಿಲ್ಲದ್ದನ್ನು ಹೊಂದಿಕೊಳ್ಳದಂತೆಯೂ ನೋಡಲು ಆತನು ತನ್ನ ನಿಯಮಗಳ ಮುಖಾಂತರ ಕಾರ್ಯ ಸಾಧಿಸುತ್ತಾನೆ.

ಪೊದೆಯಲ್ಲಿ ಒಂದು ಟಗರು ಸಿಕ್ಕಿಕೊಂಡಿರುವದಕ್ಕೆ ಅದ್ಭುತ ಕಾರ್ಯದ ಅವಶ್ಯಕತೆಯಿಲ್ಲ. ಕಂಚುಕಿಯು ತಿಳಿದು ಕೊಳ್ಳುವದಕ್ಕಾಗಿ ಅವನ ರಥದ ಬಳಿಗೆ ಫಿಲಿಪ್ಪನು ಬರುವಂಥದ್ದು ಪರಿಪೂರ್ಣವಾಗಿ ನೈಸರ್ಗಿಕ ಘಟನೆಯಾಗಿತ್ತು. ಪೌಲನನ್ನು ಕೊಲೆಯಾಗುವದರಿಂದ ತಪ್ಪಿಸಲು ಪೌಲನು ಸಂಬಂಧಿಯನ್ನು ಕರ್ತನು ಉಪಯೋಗಿ ಸಿದ್ದರಲ್ಲಿ ಯಾವ ಅದ್ಭುತ ಕಾರ್ಯವೂ ಒಳಗೊಂಡಿರಲಿಲ್ಲ. ಪೌಲನ ಶರೀರದಲ್ಲಿ ಮುಳ್ಳು ನಾಟಿರುವದನ್ನು ಕುರಿತು ಯಾವುದೇ ಅದ್ಭುತ ಕಾರ್ಯದ ಅವಶ್ಯಕತೆಯಿರಲಿಲ್ಲ. ಮಳೆಗಾಗಿ ಎಲೀಯನ ಪ್ರಾರ್ಥನೆಗೆ ಉತ್ತರ ಕೊಡಲು ದೇವರು ಅದ್ಭುತ ಕಾರ್ಯವನ್ನು ಮಾಡುವ ಅವಶ್ಯಕತೆಯಿರಲಿಲ್ಲ.

ಜ್ಞಾನಕ್ಕಾಗಿ ಸೊಲೊಮೋನನ ಪ್ರಾರ್ಥನೆಯು ಅದ್ಭುತಕರವಾಗಿ ಉಪಯೋಗಿ ಸಲ್ಪಟ್ಟಿತುಣಿ ಆದರೆ ಇಂದು ಜ್ಞಾನವು ನೈಸರ್ಗಿಕ ನಿಯಮದ ಮುಖಾಂತರ ಪ್ರಾರ್ಥನೆಯಿಂದ ಕೊಡಲ್ಪಡುತ್ತದೆ (ಯಾಕೋಬ 1:5-7). ಸೆರೆಮನೆಯಿಂದ ಪೇತ್ರನ ಬಿಡುಗಡೆಯು ಅದ್ಭುತಕರವಾದದ್ದಾಗಿತ್ತು. ಕ್ರಿ.ಶ. 96ರಲ್ಲಿ ನೆರ್ವಾ ಚಕ್ರವರ್ತಿಯ ಅಪ್ಪಣೆಯಿಂದ ಡೊಮಿಷಿಯನ್‌ನ ಸೆರೆಯಿಂದ ಯೋಹಾನನ ಬಿಡುಗಡೆಯು ಅದ್ಭುತಕರವಾದದ್ದಾಗಿರಲಿಲ್ಲ.

ಬೈಬಲಿನ ಅದ್ಭುತ ಕಾರ್ಯಗಳು ದಾಟಿಹೋದ ಸಂಗತಿಯಿಂದ ದೇವರ ವಿಶೇಷ ಕಟಾಕ್ಷದ ಬಗ್ಗೆ ಕ್ರೈಸ್ತನು ನಿರಾಶನಾಗಬಾರದು.

**ವಿಶೇಷ ದೈವಾನುಗ್ರಹದ ಪ್ರಮುಖ ಉದಾಹರಣೆ**

ವಿಶೇಷ ದೈವ ಕಟಾಕ್ಷದ ಪ್ರಮುಖ ಉದಾಹರಣೆಯು ದೇವರು ಯೇಸುವನ್ನು ಪಾಪಹೊರುವವನಂತೆ ಒದಗಿಸಿಕೊಟ್ಟದ್ದು, *Yahweh Yir'eh*ಯು ಅಬ್ರಹಾಮನು ಅತಿಯಾದ ಅಗತ್ಯತೆಯಲ್ಲಿದ್ದಾಗ ಟಗರನ್ನು ಒದಗಿಸಿಕೊಟ್ಟನು. ಅದೇ *Yahweh Yir'eh*ಯು ಮಾನವನು ಅತಿಯಾದ ಅಗತ್ಯತೆಯಲ್ಲಿದ್ದಾಗ ವಿಶೇಷವಾದ ರೀತಿಯಲ್ಲಿ ದೇವರ ಕುರಿಮರಿಯಾದಾತನನ್ನು ಒದಗಿಸಿಕೊಟ್ಟನು. ಅಬ್ರಾಹಾಮನು ಟಗರನ್ನು ತೆಗೆದುಕೊಂಡು ಅದನ್ನು ಉಪಯೋಗಿಸಿದ ಹಾಗೆಯೇ ದೇವರ ಹೇಳಲಾರದಂಥ ಕಟಾಕ್ಷದ ಕೊಡುಗೆಯು, ಕ್ಷಮಾಪಣೆಯು ಮೊದಲು ಉಪಯೋಗಿಸಲ್ಪಡತಕ್ಕದ್ದು ಹಾಗ ಆನಂದವು ಪಾಪಭರಿತ ಆತ್ಮಗಳಿಗೆ ಬರುವುದು.

ಎಲ್ಲಾ ಮಾನವ ಕುಲಕ್ಕೆ ದೇವರ ಸಾಮಾನ್ಯವಾದ ಕಟಾಕ್ಷವು ತನ್ನ ಮಕ್ಕಳಿಗೆ ವಿಶೇಷ ಜೋಪಾಸನೆಯನ್ನು ತೆಗೆದು ಹಾಕುವದಿಲ್ಲ. ಆತನು ಪ್ರತಿಯೊಬ್ಬನಿಗೆ ಅಗತ್ಯವಾದದ್ದನ್ನು ಅದು ಒಳ್ಳೆಯದಾಗಿರಲಿ, ಕಹಿಯಾದದ್ದಾಗಿರಲಿ ಕೊಡುವನು. ಅದ್ಭುತ ಕಾರ್ಯಗಳ ಯುಗವು ದಾಟಿ ಹೋದದ್ದು ಆತನ ಮಕ್ಕಳ ಅಗತ್ಯತೆಗಳನ್ನೂ ಆನಂದವನ್ನೂ ನೋಡುವದಕ್ಕೆ Yahweh Yir'ehಯನ್ನು, ಸರ್ವಶಕ್ತನೂ ದಯೆಯುಳ್ಳವನೂ ಆದಾತನನ್ನು ಅಡ್ಡೀಪಡಿಸುವದಿಲ್ಲ.

## *YAHWEH NISSI:* "ಯೆಹೋವನೇ ನನ್ನ ಜಯಧ್ವನಿ"

ಕುರುಬನಾದ ಮೋಶೆ ಇತ್ರೋನನ ಮಂದೆಯನ್ನು ಕಾಯುವಾಗ ತೆಗೆದುಕೊಂಡು ಹೋಗುತ್ತಿದ್ದ ಕೋಲು ಬಹಳ ಪ್ರಸಿದ್ಧವಾಯಿತು. ಮೋಶೆ ಅದನ್ನು ನೆಲದ ಮೇಲೆ ಬೀಸಾಡಿದಾಗ ದೇವರ ಶಕ್ತಿಯು ಅದನ್ನು ಸರ್ಪವಾಗಿ ಮಾರ್ಪಡಿಸಿತು (ವಿಮೋಚನಕಾಂಡ 4:3). ಅವನು ಅದನ್ನು ಎತ್ತಿ ತೆಗೆದು ಕೊಂಡಾಗ ಅದು ಪುನ   ಕೋಲಾಯಿತು. ಈ ಅದ್ಭುತವಾದ ಶಕ್ತಿಯು ದೇವರು ನಿಜವಾಗಿಯೂ ಮೋಶೆಗೆ ಪ್ರತ್ಯಕ್ಷವಾದನು ಎಂಬುದನ್ನು ಇಬ್ರಿಯರಿಗೆ ದೃಢಪಡಿಸುವಂಥದ್ದಾಗಿತ್ತು. ಅದ್ಭುತಕಾರ್ಯವು ಮಾಡಲ್ಪಟ್ಟಾಗ, ಜನರು ನಂಬಿದರು, ತಮ್ಮ ತಲೆಗಳನ್ನು ಬಾಗಿಸಿದರು ಹಾಗೂ ಆರಾಧಿಸಿದರು.

ಹಾಗೆಯೇ, ಅದೇ ಕೋಲು ದೇವರಿಗೆ ತನ್ನನ್ನು ಒಪ್ಪಿಸಿಕೊಡಲು ಫರೋಹನನ್ನು ಮನವೊಲಿಸಲು ವ್ಯರ್ಥ ಪ್ರಯತ್ನದಲ್ಲಿ ಉಪಯೋಗಿಸಲ್ಪಟ್ಟಿತು (ವಿಮೋಚನಕಾಂಡ 7:10). ಹಾಗೆಯೇ, ನೀರನ್ನು ರಕ್ತವಾಗಿ ಮಾರ್ಪಡಿಸಲು, ಕಪ್ಪೆಗಳನ್ನು ಬಹು ಸಂಖ್ಯೆಯಲ್ಲಿ ಹೆಚ್ಚಿಸಲು, ಧೂಳನ್ನು ಹೇನುಗಳನ್ನಾಗಿ ಮಾರ್ಪಡಿಸಲು, ಗುಡುಗನ್ನೂ ಅಲೆಕಲ್ಲಿನ ಮಳೆಯನ್ನೂ ಬರುವಂತೆ ಮಾಡಲು ಮತ್ತು ನೆಲದಮೇಲೆ ಬೆಂಕಿ ಹರಿಯುವಂತೆ ಮಾಡಲು, ಹಾಗೂ ಮಿಡಿತೆಗಳ ಬಾಧೆಯನ್ನುಂಟುಮಾಡಲು - ಮೋಶೆ ಮತ್ತು ಆರೋನರ ಸಹಾಯದಿಂದ ದೇವರ ಸಾಧನವಾಗಿ ಅದು ಉಪಯೋಗಿಸಲ್ಪಟ್ಟಿತು (ವಿಮೋಚನಕಾಂಡ 7:15-10:13). ಬಹುಶ   ಮೂರು ದಿನಗಳ ಕತ್ತಲೆಯನ್ನು ಪ್ರಾರಂಭಿಸುವದರಲ್ಲಿಯೂ ಅದು ಒಂದು ಪಾತ್ರವಹಿಸಿತು. ಮೋಶೆಯು ತನ್ನ ಕೋಲನ್ನು ಮೇಲಕ್ಕೆತ್ತಿ ಕೆಂಪು ಸಮುದ್ರದ ಮೇಲೆ ತನ್ನ ಕೈಗಳನ್ನು ಚಾಚಿದಾಗ ಸಮುದ್ರವು ವಿಭಾಗವಾಯಿತು. ಕೆಂಪು ಸಮುದ್ರವು ಪುನ ಮುಚ್ಚಿಕೊಳ್ಳುವಾಗ ಅದೇ ವಿಧಾನವು ಉಪಯೋಗಿಸಲ್ಪಟ್ಟಿತು. ಆಮೇಲೆ ಅರಣ್ಯದಲ್ಲಿ

ಬಾಯಾರಿದ ಜನರು ಮೋಶೆಯಿಂದ ಹೊಡೆಯಲ್ಪಟ್ಟ ಬಂಡೆಯಿಂದ ಬಂದ ನೀರನ್ನು ಕುಡಿದು ತೃಪ್ತರಾದರು (ಅರಣ್ಯಕಾಂಡ 20:11).

ಇಸ್ರಾಯೇಲಿನ ಮೇಲೆ ದಾಳಿಮಾಡಲ್ಪಟ್ಟಾಗ, ಮೋಶೆಯು ತನ್ನ ಕೋಲನ್ನು ಮೇಲಕ್ಕೆತ್ತಿ ಹಿಡಿದಿರುವವರೆಗೆ ದೇವರ ಜನರು ಗೆಲ್ಲುತ್ತಿದ್ದರು. ಮೋಶೆಯ ಕೈಗಳು ಭಾರವಾದಾಗ ಮತ್ತು ವಿಶ್ರಾಂತಿ ಪಡೆಯಲು ಅವುಗಳನ್ನು ಕೆಳಗಿಳಿಸಿದಾಗ, ವೈರಿ ಸೈನ್ಯವು ಗೆಲ್ಲುತ್ತಿತ್ತು. ದೇವರ ಜನಾಂಗಕ್ಕಾಗಿ ಜಯವು ಆರೋನ ಮತ್ತು ಹೂರರ ಸಹಾಯದ ಮೂಲಕ ಬಂದಿತು. ಮೋಶೆಯು ಕುಳಿತು ಕೊಂಡಿರುವಾಗ ಆರೋನ ಮತ್ತು ಹೂರರು ಅವನ ಒಂದೊಂದು ಪಕ್ಕದಲ್ಲಿ ನಿಂತುಕೊಂಡು ಅವನ ಕೈಗಳನ್ನು ಸೂರ್ಯಾಸ್ತಮಾನವಾಗುವವರೆಗೆ ಎತ್ತಿ ಹಿಡಿದರು. ಕರ್ತನಿಂದ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಜಯವನ್ನು ಆಚರಿಸಲಿಕ್ಕೆ ಮೋಶೆಯು ಒಂದು ಯಜ್ಞವೇದಿಯನ್ನು ಕಟ್ಟಿದನು ಮತ್ತು ಅದಕ್ಕೆ *Yahweh Nissi* "ಯೆಹೋವನೇ ನನ್ನ ಜಯಧ್ವಜ" (ವಿಮೋಚನಕಾಂಡ 17:15) ಎಂದು ಹೆಸರಿಟ್ಟನು. ಇತರ ಉದ್ದೇಶಗಳಿಗೂ ಬಹಲವಾಗಿ ಉಪಯುಕ್ತವಾಗಿದ್ದ ಕೋಲನ್ನು, ಈಗ ಮೋಶೆಯು ಒಂದು *nes*, ಒಂದು ಧ್ವಜ, ಒಂದು ನಿಶಾನೆ, ಒಂದು ಬಾವುಟ ಎಂದು ಕರೆದನು. ಹೀಗೆ ಮೋಶೆಯು, ಇಸ್ರಾಯೇಲ್ಯರು ತಮ್ಮ ಸ್ವಂತ ಬಲದಿಂದ ಯುದ್ಧವನ್ನು ಗೆಲ್ಲಲಿಲ್ಲ, ಆದರೆ ದೇವರು ಅವರಿಗೆ ಜಯವನ್ನು ಕೊಟ್ಟಿದ್ದಾನೆ ಎಂದು ಘೋಷಿಸಿದನು.

ಇದರಂತೆಯೇ ಪಾಪದ ಮೇಲಿನ ಜಯವು ಒಂದು nesದ, ಒಂದು ಧ್ವಜದ ದೃಷ್ಟಾಂತದಲ್ಲಿ ಇಡಲ್ಪಟ್ಟಿದೆ. ಪ್ರವಾದನೆಗನುಗುಣವಾಗಿ, "ಜನಾಂಗಗಳು ತಮಗೆ ಧ್ವಜಪ್ರಾಯನಾಗಿ ನಿಂತಿರುವ ಇಷಯನ ಅಂಕುರವನ್ನು ಆಶ್ರಯಿಸುವವುಣಿ ..." ದಿನವು ಬರುವುದು (ಯೆಶಾಯ 11:10). ದೇವರು ಕ್ರಿಸ್ತನನ್ನು ಧ್ವಜದಂತೆ ನಿಲ್ಲಿಸುವನು. ರಾಷ್ಟ್ರಗಳೂ ಇಸ್ರಾಯೇಲೂ ಅದರ ಸುತ್ತ ಕೂಡಿಬರುವವು (ಯೆಶಾಯ 11:12). ಒಂದು *nes*, ಒಂದು ಸ್ತಂಭದ ಮೇಲೆ ಅರಣ್ಯದಲ್ಲಿ ತಾಮ್ರದ ಸರ್ಪವು ಇಡಲ್ಪಟ್ಟದ್ದು ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟದಕ್ಕೆ ಸಂಕೇತವಾಯಿತು (ಅರಣ್ಯಕಾಂಡ 21:8, 9ಣಿ ಯೋಹಾನ 3:14). ರಕ್ಷಕನು ಒಂದು *nes*ನು ಎಂದು (*nasas*ದಿಂದ, ಅದರ ಅರ್ಥ "ಮೇಲಕ್ಕೆತ್ತು, ಉನ್ನತಕ್ಕೇರಿಸು, ಎಬ್ಬಿಸು") ಆತನು, "ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನು ನನ್ನ ಬಳಿಗೆ ಎಳಕೊಳ್ಳುವೆನು" (ಯೋಹಾನ 12:32) ಎಂದು ಹೇಳಿದಾಗ ಶಿಲುಬೆಯ ರೂಪದಲ್ಲಿ ಹೇಳಿದನು. ಅಮಾಲೆಕ್ಯರ ಮೇಲಿನ ಜಯಕ್ಕಿಂತ ಪಾಪದ ಮತ್ತು ಸಮಾಧಿಯ ಮೇಲಿನ ಯೇಸುವಿನ ಜಯವು ಹೆಚ್ಚು ಅರ್ಥಗರ್ಭಿತವಾದದ್ದಾಗಿದೆ, ಆತನೂ ಸಹ, *Yahweh Nissi*, "ಯೆಹೋವನು ... ನನ್ನ ಧ್ವಜ."

## *YAHWEH SHALOM:* "ಯೆಹೋವನು ಸಮಾಧಾನ ಪ್ರದನು"

ಗಿದ್ಯೋನನು ತಾನು ಮುಖಾಮುಖಿಯಾಗಿ ದೇವರ ದೂತನನ್ನು ಕಂಡಿದ್ದೇನೆ ಎಂದು ಕೊಂಡಾಗ (ನ್ಯಾಯಸ್ಥಾಪಕರು 6:22), ತಾನು ಸಾಯತಕ್ಕವನು ಎಂದು ಭಯಪಟ್ಟನು. "ಸಮಾಧಾನದಿಂದಿರು, ಹೆದರ ಬೇಡ, ನೀನು ಸಾಯುವದಿಲ್ಲ" ಎಂದು ಹೇಳಿ ಯೆಹೋವನು ಅವನ ಜೀವವನ್ನು ಉಳಿಸಿದಾಗ, ಮೆಚ್ಚಿಸುವದಕ್ಕಾಗಿ ಗಿದ್ಯೋನನು ಒಂದು ಯಜ್ಞವೇದಿಯನ್ನು ಕಟ್ಟಿ ಅದಕ್ಕೆ *Yahweh Shalom:* "ಯೆಹೋವನು ಸಮಾಧಾನ ಪ್ರದನು" (ನ್ಯಾಯಸ್ಥಾಪಕರು 6:24) ಎಂದು ಅದನ್ನು ಕರೆದನು.

ನಾವು ಪಾಪಿಗಳಂತೆ ಪಾಪದಲ್ಲಿ ಸಾಯದಿರುವ ಹಾಗೆ, ಸಮಾಧಾನ ಪ್ರದನಾದ ಕರ್ತನು (ಯೆಹೋವನು), ಸಮಾಧಾನದ ಅರಸನನ್ನು, ಆತನ ಶಿಲುಬೆಯ ರಕ್ತದಿಂದ

ಸಮಾಧಾನ ಪಡಿಸಲು ಕಳುಹಿಸಿಕೊಟ್ಟನು. ಇದಲ್ಲದೇ, *Yahweh Shalom,* ಸಮಾಧಾನಪ್ರದ ದೇವರಂತೆ ತನ್ನ ಚಿತ್ತವನ್ನು ಮಾಡಲಿಕ್ಕೆ ಪ್ರತಿಯೊಂದರಲ್ಲಿ ನಾವು ಪರಿಪೂರ್ಣರಾಗಿ ಮಾಡಲ್ಪಡಲು ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು.

## *YAHWEH TSEBA'OTH:* "ಸೈನ್ಯಗಳ ಅಧಿಪತಿಯಾದ ಯೆಹೋವ"

*Yehweh Tseba'oth* "ಸೈನ್ಯಗಳ ಅಧಿಪತಿಯಾದ ಯೆಹೋವ" ಎಂಬ ಮಾತು ಸೃಷ್ಟಿಯಲ್ಲಿಯ ಸಂಗತಿಗಳ ದೊಡ್ಡ ಸಂಖ್ಯೆಯನ್ನು, ಜನ ಸಮೂಹಗಳನ್ನು ಮತ್ತು ದೇವರ ನಿಯಂತ್ರಣದಲ್ಲಿರುವ ದೇವದೂತರ ಗಣಗಳನ್ನು ಪ್ರತಿನಿಧಿಕರಿಸುತ್ತದೆ. ದೇವರು ಉಪಯೋಗಿಸಲು ಇರುವ ಮಿತಿಯಿಲ್ಲದ ಬಲವು ಆತನು ಹೇಳುವಂತೆ ಮಾಡಲು ಸಿದ್ಧ ವಾಗಿರುವವರ ಅಪಾರ ಸಂಖ್ಯೆಯನ್ನು ತೋರಿಸುತ್ತದೆ. ದಾವೀದನು ಗೊಲ್ಯಾತನನ್ನು ಕರೆಯುವಾಗ ಉಪಯೋಗಿಸಿದ ಮಾತಿನಿಂದ ವಿವರಿಸಿದ ರೂಪಕವಿದಾಗಿದೆ: "ನೀನು ಈಟಿ ಕತ್ತಿ, ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀಣಿ ನಾನಾದರೋ ನೀನು ಹೀಯಾಳಿಸಿದಂಥ ಸೈನ್ಯಗಳ ಅಧಿಪತಿಯೂ, ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ" (1 ಸಮುವೇಲ 17:45). ಅದೇ ದೇವರು ಸೂರ್ಯ, ಚಂದ್ರ, ನಕ್ಷತ್ರಗಳ ಮೇಲೆ - "ಎಲ್ಲಾ ಆಕಾಶ ಸೈನ್ಯದ" ಮೇಲೆ (ಧರ್ಮೋಪದೇಶಕಾಂಡ 4:19ಣಿ ಕೀರ್ತನೆ 33:6) ಆಳಿಕೆ ಮಾಡುತ್ತಾನೆ. ಆತನು ಅಗಣಿತ ದೇವದೂತರುಗಳಿಂದ ಕೊಂಡಾಡಲ್ಪಡುತ್ತಾನೆ ಮತ್ತು ಸೇವೆ ಮಾಡಲ್ಪಡುತ್ತಾನೆ (ಆದಿಕಾಂಡ 32:1, 2ಣಿ ಕೀರ್ತನೆ 103:20, 21ಣಿ 148:2ಣಿ ಪ್ರಕಟನೆ 5:11).

ಹೊಸ ಒಡಂಬಡಿಕೆಯಲ್ಲಿ *Tseba'oth* ಪದವು ಎರಡು ಸಲ ಬಂದಿದ್ದು ಮೊದಲನೆಯ ಸಲ ರೋಮಾಪುರ 9:29ರಲ್ಲಿ ಬರುತ್ತದೆ, ಅಲ್ಲಿ *"Sabaoth"* "ಸೈನ್ಯಗಳ ಅಧಿಪತಿಯಾದ ಕರ್ತನು" ಎಂದು ಬರೆಯಲ್ಪಟ್ಟಿದೆ. "ಸೈನ್ಯಗಳ ಅಧಿಪತಿಯಾದ ಕರ್ತನು" ಎಂಬುದರ ಬಗ್ಗೆ ಪೌಲನು ಯೆಶಾಯ 1:9ರಿಂದ ಉಲ್ಲೇಖಿಸಿ ಮಾತಾಡಿದನು. ಅಲ್ಲಿ *"Sabaoth"* "ಸೈನ್ಯಗಳ ಅಧಿಪತಿಯಾದ ಯೆಹೋವನು" *"the LORD of hosts"* ಎಂದಿರುತ್ತದೆ. ಈ ಮಾತು ದೇವರ ಸೈನ್ಯಗಳ, ಮಿತಿಯಿಲ್ಲದ ಸಂಪನ್ಮೂಲಗಳ ಕರ್ತನ ವಿವರಣೆಯಾಗಿದೆ. ಸಂದರ್ಭಕ್ಕೆ ಅನುಗುಣವಾಗಿ ಆತನು ಇಸ್ರಾಯೇಲಿನ ಜನಶೇಷವನ್ನು ನಾಶನದಿಂದ ಬಿಡುಗಡೆ ಮಾಡಲು ಮತ್ತು ಅನ್ಯಜನಾಂಗದವರು ತನ್ನ ಜನಾಂಗವಾಗುವಂತೆ ಮಾಡಲು ಶಕ್ತನಾಗಿದ್ದಾನೆ. ಕರ್ತನ ಮೇಲೆ ನಿರ್ಬಂಧವಿದ್ದಿರಲಿಲ್ಲ ಮತ್ತು ಇರುವದಿಲ್ಲ.

ಹೊಸ ಒಡಂಬಡಿಕೆಯಲ್ಲಿ *Yahweh Tseba'oth* ಎಂಬ ಹಳೇ ಒಡಂಬಡಿಕೆಯ ಮಾತು ಎರಡನೆಯ ಸಲ ಯಾಕೋಬ 5:4ರಲ್ಲಿ ಬರುತ್ತದೆ. ಅಲ್ಲಿ *"the LORD of Sabaoth"* "ಸಕಲ ಸೈನ್ಯಗಳ ಅಧಿಪತಿಯಾಗಿರುವ ಕರ್ತನು" ಎಂದಿರುತ್ತದೆ. ಅಲ್ಲಿ ಸೈನ್ಯಗಳ ದೇವರು, ಅಗಣಿತ ಸಂಪನ್ಮೂಲಗಳ ದೇವರು, ಅನ್ಯಾಯವಾದ ಕಾರ್ಮಿಕ ಪದ್ಧತಿಗಳನ್ನು ಸರಿಪಡಿಸಲ್ಪಡುವಂತೆ ನೋಡಿಕೊಳ್ಳುವನೆಂದು ಅಲ್ಲಿ ನಾವು ಓದುತ್ತೇವೆ.

## *YAHWEH TSIDQENU:* "ಯೆಹೋವನೇ ನಮ್ಮ ನೀತಿ"

ಯೇಸುವೆ ನೀತಿಯೆಂದು ಆತನ ಮೇಲೆ ಸಂಪೂರ್ಣವಾಗಿ ಆಶ್ರಯಿಸಲು ಒಬ್ಬನು ಸಿದ್ಧನಾಗುವಾಗ, ಅವನು ಯೆರೆಮೀಯ 23:6ರಲ್ಲಿ *Yahweh Tsidqenu* "ಯೆಹೋವನೇ ನಮ್ಮ ನೀತಿ" ಎಂಬ ಮುಂತಿಳಿಸುವಿಕೆಯ ಹೇಳಿಕೆಯಂತೆ ದೇವರನ್ನು ಕೊಂಡಾಡಲು

ಸಿದ್ಧನಾಗುವನು: "ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತವಾಗಿರುವರು, ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರುಣಿ ಯೆಹೋವ ಚಿದ್ಕೇನು (ಅಂದರೆ ಯೆಹೋವನೇ ನಮ್ಮ ನೀತಿ) ಎಂಬ ಹೆಸರು ಅವನಿಗಾಗುವುದು." ಇದನ್ನು ಮಾಡುವದಕ್ಕಾಗಿ ಒಬ್ಬನು ತನ್ನ ಸ್ವನೀತಿ ಯನ್ನು, ಹೊಲೆಯಬಟ್ಟೆಯೆಂದು ತಿಳಿದು (ಯೆಶಾಯ 64:6) ಅದನ್ನು ನಂಬುವದನ್ನು ಬಿಟ್ಟುಬಿಡಬೇಕು (ನೋಡಿರಿ ತೀತ 3:5), ರಕ್ಷಿಸಲ್ಪಟ್ಟ ವ್ಯಕ್ತಿಗೆ ಯೇಸುವು, ಹೆಚ್ಚಳ ಪಡುವವನು ಕರ್ತನಲ್ಲಿಯೇ ಹೆಚ್ಚಳ ಪಡುವಂತೆ, "ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು" (1 ಕೊರಿಂಥ 1:30). ಯೇಸು ನಮ್ಮ ಪಾಪ ಹೊರುವವನಾದನುಣಿ ನಾವು ನೀತಿವಂತರೆಂದು ಘೋಷಿಸಲ್ಪಡುವದಕ್ಕಾಗಿ, ಯೇಸುವು ಶಿಲುಬೆಯ ಮೇಲಿದ್ದಾಗ, ಆತನಲ್ಲಿ ಯಾವುದೇ ಪಾಪವಿಲ್ಲದಿದ್ದರೂ ಆತನನ್ನು ದೇವರು ಪಾಪದಂತೆ ನೋಡಿದನು (2 ಕೊರಿಂಥ 5:21). ಕಲ್ವಾರಿಯ ಮೇಲೆ ಆತನು "ಪ್ರಾಯಶ್ಚಿತ್ತ ಯಜ್ಞ" ವಾದಾಗ (ಯೆಶಾಯ 53:10), ದೇವರು ಯೇಸುವಿನ ಮೇಲೆ "ನಮ್ಮ ಎಲ್ಲಾ ದೋಷಗಳನ್ನು ಹಾಕಿದನು" (ಯೆಶಾಯ 53:6). "ಯೆಹೋವನೇ ನಮ್ಮ ನೀತಿ" ಎಂದು ಯೇಸುವಿನ ಬಗ್ಗೆ ಯೆರೆಮೀಯನ ಮುಂತಿಳಿಸುವಿಕೆಯು ಕ್ರಿಸ್ತನ ಹೋಲಿ ಸಲಾರದ ನೀತಿಯ ಬಗ್ಗೆ ಪೌಲನ ತಿಳುವಳಿಕೆಯಲ್ಲಿ ಸ್ಪಷ್ಟವಾಗಿ ನೆರವೇರಿದ್ದು ಕಂಡು ಬರುತ್ತದೆ:

> ... ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವುದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನೂ ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನಂದರೆ - ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ಧರ್ಮಶಾಸ್ತ್ರ ದಿಂದಾಗುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕು ವಂಥ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡು ವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳ ಬೇಕೆಂಬುದೇ (ಫಿಲಿಪ್ಪಿ 3:8, 9).

---

ಟಿಪ್ಪಣಿ

[1]ಮಾನವ ತುಟಿಗಳ ಮೇಲೆ "Yahweh" ಹೆಸರಿನ ಪ್ರಥಮ ದಾಖಲೆಯು ಹವ್ವಳಿಂದ ಇದೆ. (ಆದಿಕಾಂಡ 4:1). ಸಮಾನ್ಯವಾಗಿ ಸೇತನ ದಿನಗಳಲ್ಲಿ ಜನರಿಂದ ಅದು ಉಪಯೋಗಿಸಲ್ಪಟ್ಟಿತು (ಆದಿಕಾಂಡ 4:26). ಹೆಸರನ್ನು ಉಪಯೋಗಿಸಿದ ಇತರರಲ್ಲಿ ಅಬ್ರಾಮ (ಆದಿಕಾಂಡ 15:2) ಅವನ ಸೇವಕ (ಆದಿಕಾಂಡ 24:12), ಲಾಬಾನ ಮತ್ತು ಬೆತೂವೇಲು (ಆದಿಕಾಂಡ 24:50), ಅಬಿಮೆಲೆಕ (ಆದಿಕಾಂಡ 26:28), ಯಾಕೋಬ (ಆದಿಕಾಂಡ 28:16) ಹಾಗೂ ರಾಹೇಲ (ಆದಿಕಾಂಡ 30:24) ಇದ್ದಾರೆ.

---

## *MALAK YAHWEH:* "ಯೆಹೋವನ ದೂತನು"

ಆದಿಕಾಂಡ 16:7ರಲ್ಲಿ ದೇವರಿಗೆ ಅಸಾಮಾನ್ಯವಾದ ಉಲ್ಲೇಖವು ಕಂಡು ಬರುತ್ತದೆ: *Malak Yahweh* "ಯೆಹೋವನ ದೂತನು." ಸಹಜವಾಗಿ *Malak 'Elohim,* "ದೇವ

ದೂತನು" ಎಂದೂ ಕರೆಯಲ್ಪಟ್ಟಿದ್ದಾನೆ (ನ್ಯಾಯಸ್ಥಾಪಕರು 6:20, 21).

*ದೈವತ್ವವಲ್ಲ.* ಕೆಲವರು ಯೆಹೋವನ ದೂತನನ್ನು ದೇವರೊಂದಿಗೂ ಯೇಸುವಿನೊಂದಿಗೂ ಸರಿ ಸಮಾನನ್ನಾಗಿ ಮಾಡುತ್ತಾರೆ. ಈ ದೇವದೂತನು (ಆದಿಕಾಂಡ 16:7, 13)ಣಿ "a God" ಎಂದು ಕರೆಯಲ್ಪಟ್ಟಿದ್ದಾನೆಣಿ ಆದರೆ ದೇವದೂತರು ಗಳು ದೇವರ ಸೇವಕರುಗಳು (ಪ್ರಕಟನೆ 22:8, 9) ಆಗಿದ್ದುದರಿಂದ, ದೇವರಾಗಿರದೇ ಇರುವದರಿಂದ, ದೇವರು ಎಂಬ ಅವರ ಅಂಕಿತವು ಒಂದು ವಿಶೇಷವಾದ ಅರ್ಥದಲ್ಲಿರ ಬೇಕು. ದೇವರು ದೇವದೂತರ ಬಗ್ಗೆ "ನನ್ನ ನಾಮ ಮಹಿಮೆ ಆತನಲ್ಲಿ ಇರುವುದು" (ವಿಮೋಚನಕಾಂಡ 23:20, 21) ಎಂದು ಹೇಳಿದ್ದನ್ನು ಹೊಂದಿಕೊಳ್ಳುವ ಅರ್ಥದಲ್ಲಿ ಅವನನ್ನು ದೇವರೆಂದು ಮಾತಾಡಿರಬಹುದು. ಯಾಕಂದರೆ ಅವನು ದೇವರ ವೈಯಕ್ತಿಕ ಪ್ರತಿನಿಧಿಯಾಗಿದ್ದನು. ದೇವರ ವೈಯಕ್ತಿಕ ಪ್ರತಿನಿಧಿಯಂತೆ ಅವನನ್ನು ನೋಡುವುದು ದೇವರನ್ನು ನೋಡುವಂತೆ ಆಗಿದೆಯೆಂದು ಯೋಚಿಸಲ್ಪಟ್ಟಿತು (ಆದಿಕಾಂಡ 32:24, 30ಣಿ ಹೋಶೇಯ 12:4ಣಿ ನ್ಯಾಯಧಿ ಪತಿಗಳು 6:22, 23). ಈ ದೇವದೂತನು ಊಹಿಸದೆ, ತಾನು ದೇವರಾಗಿರುವಂತೆ ಮಾತಾಡಬಹುದು (ಆದಿಕಾಂಡ 16:10ಣಿ 22:12). ಹಾಗಿದ್ದರೂ ಪ್ರತಿನಿಧಿಕವಾಗಿ ಅವನು ಕೇವಲ ದೇವರಾಗಿದ್ದನುಣಿ ಅವನು ನಿಜ ವಾಗಿ ದೇವರಾಗಿರಲಿಲ್ಲ. ದೇವರಾಗಿರುವದರ ಬದಲು, ಅವನು ದೇವರ ಸೊತ್ತಾಗಿದ್ದನು, ಸಂದೇಶ ವಾಹಕನಾಗಿದ್ದನು. ದೇವರು ತಾನು ಇಸ್ರಾಯೇಲ್ಯರ ಸಂಗಡ ಹೋಗುವದಿಲ್ಲ ಆದರೆ ತನ್ನ ದೂತನು ಹೋಗುವನು ಎಂಬುದನ್ನು ತಿಳಿಸುವದರಿಂದ ತನಗೂ ಕರ್ತನ ದೂತನಿಗೂ ಭಿನ್ನತೆ ತೋರಿಸುವನು (ವಿಮೋಚನಕಾಂಡ 33:2, 3ಣಿ ನೋಡಿರಿ. ನ್ಯಾಯಸ್ಥಾಪಕರು 2:1). ಇದಲ್ಲದೆ, ಕರ್ತನ ದೂತನು ಆರಾಧಿಸಲ್ಪಡುವದನ್ನು ನಿರಾಕರಿಸಿದನು (ನ್ಯಾಯಸ್ಥಾಪಕರು13:16). ಅವನು ತಾನೇ ದೇವರಾಗಿದ್ದರೆ ಇಲ್ಲವೇ ದೇಹಧಾರಿಯಾಗುವದಕ್ಕಿಂತ ಮೊದಲಿನ ಯೇಸುವಾಗಿದ್ದರೆ ಇದು ಹೀಗಾಗುತ್ತಿರಲಿಲ್ಲ.

*ವಿಶೇಷ ದೂತನು.* ಯೆಹೋವನ ದೂತನು, ದೇವರು ಆಗಿರದೇ, ವಿಶೇಷ ದೂತನಾಗಿರಬೇಕು. ತನ್ನಲ್ಲಿ ದೇವರ ಹೆಸರನ್ನು ಧರಿಸಿಕೊಳ್ಳುವದರಲ್ಲಿ ಆತನು ವಿಶೇಷ ನಾಗಿದ್ದಾನೆ. ಹಾಗೂ ಅವನು ದೇವರ ವಿಶೇಷ ಪ್ರತಿನಿಧಿಯಾಗಿದ್ದಾನೆ (ವಿಮೋಚನಕಾಂಡ 23:21). ಅವನು ದೇವರ ಸನ್ನಿಧಿಯಲ್ಲಿ ನಿಲ್ಲುವ (ಲೂಕ 1:19) ಮತ್ತು ಮರಿಯಳು ಯೇಸುವಿನ ತಾಯಿಯಾಗುವಳು ಎಂಬ ಸಂದೇಶವನ್ನು ಮರಿಯಳ ಬಳಿಗೆ ಒಯ್ಯಲು ಗೌರವಿಸಲ್ಪಟ್ಟ ಗಾಬ್ರಿಯೇಲ ನಾಗಿರಬಹುದು. ಇನ್ನೊಂದೆಡೆಯಲ್ಲಿ ದೇವದೂತನು ಪ್ರಧಾನ ದಿವ್ಯಪಾಲಕನಾಗಿರಲು ನೇಮಿಸಲ್ಪಟ್ಟ ಮಿಕಾಯೇಲ ನಾಗಿರ ಬಹುದು (ದಾನಿಯೇಲ 10:13ಣಿ 12:1), ಪ್ರಧಾನ ದೂತನೂ ಆಗಿರಬಹುದು (ಯೂದ 9). ಕ್ರಿಸ್ತನು ಆಕಾಶದಲ್ಲಿ ಪ್ರತ್ಯಕ್ಷವಾಗುವಾಗ ಕೇಳಲ್ಪಟ್ಟವನ ಧ್ವನಿಯೂ ಅವನದಾಗಿರಬಹುದು (ನೋಡಿರಿ 1 ಥೆಸಲೋನಿಕ 4:16).

*ದೈವತ್ವದ ವಿವರಣೆ.* "ಯೆಹೋವನ ದೂತನು," ಎಂಬುದು ದೇವರ ಹೆಸರಿನಲ್ಲಿ ಮಾತಾಡುವ ಅಧಿಕಾರದೊಂದಿಗೆ ದೇವರು ತನ್ನ ವೈಯಕ್ತಿಕ ಪ್ರತಿನಿಧಿಯನ್ನು ಕಳಿಸಿದನೆಂದು ವಿವರಿಸಿದೆ. ಆದುದರಿಂದ ದೈವತ್ವದ ಈ ವಿವರಣೆಯು ಮನುಷ್ಯನಲ್ಲಿ ದೇವರ ವೈಯಕ್ತಿಕ ಆಸಕ್ತಿಯನ್ನು ಪ್ರತಿಬಿಂಬಿಸುತ್ತದೆ.